# ಸ್ವೀಕಾರ

...ಸಾಮಾಜಿಕ ಕಾದಂಬರಿ

■ ವಿವೇಕಾನಂದ ಕಾಮತ್

## ಓದಿನಲ್ಲಿ ಮುಂದಿದ್ದ ಅಪೂರ್ವ



### ಅಧ್ಯಾಯ 1

ಅಪೂರ್ವ ಎಚ್ಚರಗೊಂಡಾಗ ಎದುರಿನ ಗೋಡೆಯ ಮೇಲಿದ್ದ ಗಡಿಯಾರವು ಏಳು ಗಂಟೆ ಸೂಚಿಸುತಿತ್ತು.

'ಛೆ! ಎಷ್ಟು ಹೊತ್ತು ಮಲಗಿಬಿಟ್ಟೆ..!' ಎಂದು ದಡಬಡಿಸುತ್ತಲೇ ಹಾಸಿಗೆ ಬಿಟ್ಟೆದ್ದಳು. ಎರಡೆರಡು ಬಸ್ಸುಗಳನ್ನು ಬದಲಿಸಿಕೊಂಡು ಕಾಲೇಜಿಗೆ ಹೋಗಬೇಕಿತ್ತು. ಇಂದು ಮೊದಲ ಪೀರಿಯಡ್ ತಪ್ಪಿತೆಂದು ಕಸಿವಿಸಿಗೊಂಡಳು. ಬಚ್ಚಲಿಗೆ ಬಂದಾಗ ಹಂಡೆಯ ನೀರು ತಣ್ಣಗೆ ಕೊರೆಯುತ್ತಿತ್ತು. ಒಲೆಗೆ ಬೆಂಕಿ ಹಚ್ಚದಿರುವುದನ್ನು ಕಂಡು ದಿಗಿಲುಗೊಂಡು, ಹಾಗೇ ಬಂದು ಅಡುಗೆ ಕೋಣೆಯೊಳಗೆ ಇಣುಕಿದಾಗ ಅದೂ ನಿಶಬ್ದವಾಗಿತ್ತು. ವಿಜಯಮ್ಮ ಇಂದು ತಮ್ಮ ಕೋಣೆ ಬಿಟ್ಟು ಹೊರಗೆ ಬಾರದಿರುವುದನ್ನು ಕಂಡು ಆತಂಕಕ್ಕಿಟ್ಟಿತು.

ಅವರ ಆರೋಗ್ಯ ಹದಗೆಟ್ಟಿದೆಯೇ? ಎಂದು ಅವರ ಕೋಣೆಯ ಬಾಗಿಲಿಗೆ ಬಂದ ಅಪೂರ್ವ, ಲಘುವಾಗಿ ಬಾಗಿಲು ತಟ್ಟಿದಳು. ಅದು ಅರೆ ತೆರೆದುಕೊಂಡಾಗ, 'ಆಂಟಿ' ಎನ್ನುತ್ತಲೇ ಬಾಗಿಲು ದೂಡಿ ಒಳಗಡಿ ಇಟ್ಟಳು.